ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 6, MAY-JUNE 2021, 34-40
©*IIMRD*, Mysuru
IIMRD JOURNALS
www.iimrd.com

# ಗ್ರಾಮೀಣ ಕೃಷಿಕರ ಮಧ್ಯಪಾನದ ಸಮಸ್ಯೆಗೆ ಕಾರಣ ಮತ್ತು ಅದರಿಂದಾಗುವ ಪರಿಣಾಮಗಳು: ಸಮಾಜಶಾಸ್ತ್ರೀಯ ವಿಶ್ಲೇಷಣೆ

**ದರ್ಶನ್ ಎಚ್ ಟಿ[1] ಮತ್ತು ಆರ್ ಕೆಂಪೇಗೌಡ[2]**

**ಪೀಠಿಕೆ**

ಭಾರತ ದೇಶವು ಹಲವಾರು ಸಮಾಮಾಜಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಅವುಗಳಲ್ಲಿ ಮಧ್ಯಪಾನವು ಕೂಡ ಒಂದಾಗಿದೆ. ಭಾರತದಲ್ಲಿ ಮಧ್ಯಪಾನ ದುರಭ್ಯಾಸ ಇತ್ತೀಚಿಗೆ ಭೀಕರವಾಗತೊಡಗಿದೆ. ಮಧ್ಯಪಾನವೆಂಬುದು ನಗರ ಪ್ರದೇಶಗಳಷ್ಟೇ ಅಲ್ಲದೆ ಇಂದು ಹಳ್ಳಿಗಳಲ್ಲಿಯೂ ಹೆಚ್ಚಾಗತೊಡಗಿದೆ, ಮಧ್ಯಪಾನಕ್ಕೆ ಜನರ ಜೀವನ ಶೈಲಿ, ಮಾನಸಿಕ ದುಸ್ಥಿತಿ ಮತ್ತು ದೈಹಿಕ ಶ್ರಮವೇ ಕಾರಣವಾಗಿದೆ. ಭಾರತ ಪ್ರಾಚೀನ ಕಾಲದಲ್ಲಿ ಮಧ್ಯಪಾನವು ಧಾರ್ಮಿಕ ನಿಯಂತ್ರಣದಲ್ಲಿ ನಡೆಯುತ್ತಿದ್ದರಿಂದ ಸಾಮಾಜಿಕ ಸಮಸ್ಯೆಯಾಗಿರಲಿಲ್ಲ. ಹಳ್ಳಿಗಳಲ್ಲಿ ಹೆಚ್ಚುತ್ತಿರುವ ಮಧ್ಯಪಾನದ ಅಂಗಡಿಯಿಂದ ಅದರ ವ್ಯಾಪಕತೆಯನ್ನು ಅರಿಯಬಹುದಾಗಿದೆ. ಇಂದು ನಮ್ಮ ದೇಶದ ಎಲ್ಲಾ ಗ್ರಾಮಗಳಲ್ಲಿಯೂ ಹೆಂಡದಂಗಡಿಗಳು ತಲೆ ಎತ್ತಿವೆ ಹಳ್ಳಿಗಳಲ್ಲಿ ನೀರಿನ ಕೊರತೆ ಇದೆ ಆದರೆ ಮಧ್ಯದ ಕೊರತೆ ಇಲ್ಲ. ಹೆಂಡತಿ ಮಕ್ಕಳನ್ನು ಪ್ರೀತಿ ವಾತ್ಸ್ಯಲ್ಯದಿಂದ ನೋಡಿಕೊಳ್ಳಬೇಕಾದ, ಮನೆಯ ಆಧಾರ ಸ್ತಂಭವಾದ ಗಂಡಸರು ಕುಡಿದು ಸಂಸಾರವನ್ನು ಬೀದಿಗೆ ತರುತ್ತಿರುವುದನ್ನು ಕಂಡರೆ ನಾಗರಿಕ ಸಮಾಜ ತಲೆತಗ್ಗಿಸುವಂತಾಗಿದೆ. ಹಾಗಾಗಿ ಪ್ರಸ್ತುತ ಲೇಖನದಲ್ಲಿ ಗ್ರಾಮೀಣ ಪ್ರದೇಶದಲ್ಲಿನ ಕೃಷಿಕರು ಮಧ್ಯಪಾನದಿಂದ ಎದುರಿಸುತ್ತಿರುವ ಸಮಸ್ಯೆಗಳು, ಕಾರಣ ಮತ್ತು ಪರಿಣಾಮಗಳನ್ನು ಸಮಾಜಶಸ್ತ್ರೀಯ ದೃಷ್ಟಿಕೋನದಿಂದ ವಿಶ್ಲೇಷಿಸಲಾಗಿದೆ.

**ಅಧ್ಯಯನದ ಉದ್ದೇಶಗಳು**

- ಮಧ್ಯಪಾನ ಮಾಡುವವರ ಸಾಮಾಜಿಕ ಮತ್ತು ಆರ್ಥಿಕ ಹಿನ್ನಲೆಯನ್ನು ತಿಳಿಯುವುದು.
- ಮಧ್ಯಪಾನಕ್ಕೆ ಕಾರಣ ಮತ್ತು ಅದರಿಂದಾಗುವ ಪರಿಣಾಮಗಳನ್ನು ಅಧ್ಯಯನ ಮಾಡುವುದು.

[1]*ಸಂಶೋಧನಾ ವಿದ್ಯಾರ್ಥಿ, ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾಲಯ ತುಮಕೂರು.*

[2]*ಅತಿಥಿ ಉಪನ್ಯಾಸಕರು, ವಾಣಿಜ್ಯ ಮತ್ತು ನಿರ್ವಹಣಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಾಗಮಂಗಲ ತಾಲೂಕು, ಮಂಡ್ಯ ಜಿಲ್ಲೆ.*

**ಅಧ್ಯಯನದ ಪ್ರಾಮುಖ್ಯತೆ.**

- ಮಧ್ಯಪಾನ ಮಾಡುವವರ ಸಾಮಾಜಿಕ, ಆರ್ಥಿಕ ಮತ್ತು ಆರೋಗ್ಯ ಸಮಸ್ಯೆಗಳನ್ನು ತಿಳಿದುಕೊಳ್ಳಬಹುದು.
- ಮಧ್ಯಪಾನ ಮಾಡುವವರ ಸಾಮಾಜಿಕ ಸಂಬಂಧಗಳನ್ನು ತಿಳಿಯಲು ಸಹಾಯಕವಾಗುತ್ತದೆ.
- ಮಧ್ಯಪಾನದಿಂದ ಕುಟುಂಬ ಮತ್ತು ಸಮಾಜದ ಮೇಲಾಗುವ ಪರಿಣಾಮಗಳನ್ನು ತಿಳಿಸುತ್ತದೆ.
- ಮಧ್ಯಪಾನ ನಿಯಂತ್ರಣಕ್ಕೆ ಯೋಜನೆಗಳನ್ನು ರೂಪಿಸಲು ಸಹಾಯಕವಾಗುತ್ತದೆ.

**ಅಧ್ಯಯನದ ಇತಿಮಿತಿಗಳು**

ಈ ಅಧ್ಯಯನವು ಅತ್ಯಂತ ಹಿಂದುಳಿದಿರುವ ಗ್ರಾಮೀಣ ಪ್ರದೇಶಕ್ಕೆ ಮಾತ್ರ ಸೀಮಿತವಾಗಿದ್ದು, ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನಲ್ಲಿ ಕೃಷಿಯಲ್ಲಿ ತೊಡಗಿಸಿಕೊಂಡಿರುವ ಸಮುದಾಯವನ್ನು ಮಾತ್ರ ಒಳಗೊಂಡಿದೆ.

**ಅಧ್ಯಯನ ಕ್ಷೇತ್ರ**

ಪಸ್ತುತ ಅಧ್ಯಯನಕ್ಕೆ ಮಂಡ್ಯ ಜಿಲ್ಲೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ರಾಜ್ಯದಲ್ಲಿ ಮಂಡ್ಯ ಜಿಲ್ಲೆಯು ತನ್ನದೇ ಆದ ಚಾರಿತ್ರಿಕ ಹಿನ್ನಲೆಯನ್ನು ಹೊಂದಿರುವ ಜಿಲ್ಲೆಯಾಗಿದ್ದು, ಹೆಚ್ಚಾಗಿ ನೀರಾವರಿ ಪ್ರದೇಶವನ್ನು ಒಳಗೊಂಡಿದೆ. ಜಿಲ್ಲೆಯಲ್ಲಿ ಒಟ್ಟು ಏಳು ತಾಲೂಕುಗಳಿದ್ದು, ಈ ತಾಲೂಕುಗಳಲ್ಲಿ ನಾಗಮಂಗಲ ತಾಲೂಕನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ತಾಲೂಕಿನಲ್ಲಿ ಬಿಂಡಿಗನವಿಲೆ, ಬೆಳ್ಳೂರು, ಹೊಣಕೆರೆ, ಕಸಬಾ, ದೇವಲಾಪುರ ಎಂಬ ಐದು ಹೋಬಳಿಗಳಿದ್ದು, ಎಲ್ಲಾ ಹೋಬಳಿಗಳಲ್ಲಿಯೂ ಒಕ್ಕಲಿಗ ಸಮುದಾಯದವರ ಸಂಖ್ಯೆ ಅಧಿಕವಾಗಿದೆ. ಕೃಷಿ ಈ ಸಮುದಾಯದವರ ಮೂಲ ಮತ್ತು ಪ್ರಮುಖ ವೃತ್ತಿಯಾಗಿದೆ.

**ಸಂಶೋಧನಾ ವಿಧಾನ**

ಪ್ರಸ್ತುತ ಅಧ್ಯಯನಕ್ಕೆ ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಪ್ರಾಥಮಿಕ ಮಾಹಿತಿಗಾಗಿ ತಾಲೂಕಿನ ಐದು ಹೋಬಳಿಗಳಿಂದ ತಲಾ 10 ಕೃಷಿಕರಂತೆ ಮಧ್ಯಪಾನ ಚಟಕ್ಕೆ ಒಳಗಾಗಿರುವ 50 ಕೃಷಿಕರನ್ನು ಸರಳ ಯಾಧೃಚ್ಛಿಕ ಮಾದರಿಯಲ್ಲಿ ಆಯ್ಕೆಮಾಡಿಕೊಂಡು ಸಂದರ್ಶನ, ಅವಲೋಕನ ಮತ್ತು ಕ್ಷೇತ್ರಕಾರ್ಯವನ್ನು ಕೈಗೊಂಡು ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಅನುಷಂಗಿಕ ಅಥವಾ ಮಾಧ್ಯಮಿಕ ಮಾಹಿತಿಯನ್ನು ಗ್ರಂಥಗಳು, ಸಂಶೋಧನಾ ಮಹಾಪ್ರಬಂಧಗಳು, ನಿಯತಕಾಲಿಕೆಗಳು, ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ವರದಿಗಳು ಮತ್ತು ಅಂತರ್ಜಾಲ ಮೂಲಗಳಿಂದ ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

**ಸಾಹಿತ್ಯಾವಲೋಕನ**

ದೇಬನ್ ಬಿ. ಸಿಂಗ್ ಮತ್ತು ಇತರರು. (2018). ರವರು ತಮ್ಮ ಲೇಖನದಲ್ಲಿ ಮಧ್ಯವ್ಯಸನ ಸಮಸ್ಯೆಯು ಅಭಿವೃದ್ಧಿ ಹೊಂದಿರದ ಮತ್ತು ಹೊಂದಿದ ಎರಡು ರೀತಿಯ ದೇಶಗಳಲ್ಲಿ ಒಂದು ಗಂಭೀರ ಸಮಸ್ಯೆಯಾಗಿ ಪರಿಣಮಿಸಿದೆ. ಆದರೆ ಮಣಿಪುರದ ಆಂಡ್ರೋ ಎಂಬ ಹಳ್ಳಿಯಲ್ಲಿ ಮಧ್ಯಪಾನವನ್ನ ಒಂದು ಸಾಂಪ್ರದಾಯಿಕ ಔಷಧಿಯನ್ನಾಗಿ ಬಳಸಲಾಗುತ್ತದೆ ಎಂದು ತಿಳಿಸಿದ್ದಾರೆ. ಈ ಆಧ್ಯಯನವು ಮಣಿಪುರದ ಆಂಡ್ರೋ ಎಂಬ ಹಳ್ಳಿಯಲ್ಲಿ ಕೈಗೊಂಡಿದ್ದು 15 ರಿಂದ 30ವರ್ಷದ ಯುವಕರನ್ನ ಸಂಶೋಧನೆಗೆ ಮಾದರಿಯನ್ನಾಗಿ ಬಳಸಿಕೊಳ್ಳಲಾಗಿದೆ. ಅಂತಿಮವಾಗಿ ಈ ಹಳ್ಳಿಯ ವಯಕ್ತಿಕ ಮತ್ತು ಕೌಂಟುಂಬಿಕ ಸಮಸ್ಯೆಗಳಿಗೆ ಮಧ್ಯಪಾನವೇ ಮುಖ್ಯ ಕಾರಣವೆಂದು ತಿಳಿದು ಬಂದಿದೆ.

ರಾಧಿಕ ಕಪೂರ್ (2019) ರವರು ತಮ್ಮ ಅಧ್ಯಯನದಲ್ಲಿ ಗ್ರಾಮೀಣ ಪ್ರದೇಶದ ಸಮಸ್ಯೆಗಳು ಮತ್ತು ಸವಾಲುಗಳ ಬಗ್ಗೆ ವಿಶ್ಲೇಷಿಸಿದ್ದಾರೆ. ಈ ಸಮಸ್ಯೆಗಳು ಗ್ರಾಮೀಣ ಜನತೆಯ ಜೀವನದ ಪರಿಸ್ಥಿಗಳ ಮೇಲೆ ಹಾನಿಕಾರಕ ಪರಿಣಾಮ ಬೀರುವುದಲ್ಲದೇ ಅವರ ಪ್ರಗತಿಯನ್ನು ಸಹ ಕುಂಠಿತಗೊಳಿಸುತ್ತದೆ. ಗ್ರಾಮೀಣ ಸಮಸ್ಯೆಗಳಲ್ಲಿ ಮಧ್ಯಪಾನವು ಸಹ ಗಂಭೀರ ಸಮಸ್ಯೆಯಾಗಿದ್ದು ಇದರಿಂದ ಗ್ರಾಮೀಣ ಸಮುದಾಯದಲ್ಲಿ ಸಂಘರ್ಷಗಳು, ಹಿಂಸಾತ್ಮಕ ಕೃತ್ಯಗಳು, ಮೌಖಿಕ ನಿಂದನೆ ಹೆಚ್ಚಾಗಿ ಗ್ರಾಮೀಣ ಸಮುದಾಯದ ಶಾಂತಿ ಕದಡಿ ತಮ್ಮ ಮೂಲ ಸ್ವರೂಪವನ್ನು ಕಳೆದುಕೊಳ್ಳುತ್ತಿದೆ ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ.

ಜುರ್ಗೇನ್ ರೇಮ್ [Jürgen Rehm] (2011). ರವರು ತಮ್ಮ ಲೇಖನದಲ್ಲಿ ಅತಿಯಾದ ಮಧ್ಯಪಾನ ಸೇವನೆಯು ಅನೇಕ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಿರುವುದರ ಜೊತೆಗೆ ಅಪಾಯಕಾರಿ ಸಂಗತಿಯೂ ಆಗಿದೆ ಎಂದು ಹೇಳಿದ್ದಾರೆ. ಇವರು ತಮ್ಮ ಲೇಖನದಲ್ಲಿ ಆಲ್ಕೋಹಾಲ್ ಸೇವನೆಯಿಂದ ಕ್ಯಾನ್ಸರ್, ಮಧುಮೇಹ, ನ್ಯೂರೋಸ್ಪರಿಯಾಟ್ಸ ನಂತಹ ಮುಂತಾದ 30ಕ್ಕೂ ಹೆಚ್ಚು ರೋಗಗಳು ಬರುತ್ತವೆ ಎಂದು ಹೇಳಿದ್ದಾರೆ. ಕೇವಲ ಆರೋಗ್ಯ ಸಮಸ್ಯೆ ಮಾತ್ರವಲ್ಲದೆ ಸಾಮಾಜಿಕ ಹಾನಿಯನ್ನು ಉಂಟುಮಾಡುತ್ತದೆ, ಇದರಲ್ಲಿ ಅತಿಯಾದ ಮಧ್ಯ ಬಳಕೆಯಿಂದ ಉಂಟಾಗುವ ನೋವು ಮತ್ತು ಸಂಕಟಗಳನ್ನು ಕಡಿಮೆ ಮಾಡಲು

ಪರಿಣಾಮಕಾರಿಯಾಗಿ ತಡೆಗಟ್ಟಲು ಮತ್ತು ಅದಕ್ಕೆ ಸಂಬಂಧಿಸಿದ ವೆಚ್ಚಗಳನ್ನು ಅಭಿವೃದ್ಧಿಪಡಿಸುವ ಅಗತ್ಯವನ್ನು ಒತ್ತಿ ಹೇಳುತ್ತವೆ.

**ಮಧ್ಯಪಾನಕ್ಕೆ ಕಾರಣಗಳು**

ಈಗಾಗಲೇ ನಡೆದಿರುವ ಅಧ್ಯಯನಗಳು ಮತ್ತು ಪ್ರಸ್ತುತ ಸಂಶೋಧನೆಯಲ್ಲಿ ಕಂಡುಕೊಂಡಿರುವಂತೆ ಹಲವಾರು ಅಂಶಗಳು ಮಧ್ಯಪಾನ ಹೆಚ್ಚಾಗಲು ಕಾರಣಗಳಾಗಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಕೌಟುಂಬಿಕ ವಿಘಟನೆ, ಬಡತನ, ಮಾನಸಿಕ ಸಮಸ್ಯಗಳು, ದೈಹಿಕ ದಣಿವನ್ನು ನೀಗಿಸಲು, ಮಹಿಳೆಯರ ದೌರ್ಜನ್ಯ/ ಕಿರುಕುಳ, ಉತ್ತಮ ಪರಿಸರ ಇಲ್ಲದಿರುವುದು ಅಥವ ಭೌಗೋಳಿಕ ಅಂಶಗಳು, ಉದ್ಯೋಗವಿಲ್ಲದಿರುವುದು, ಪ್ರೇಮ ವೈಫಲ್ಯ, ಮನರಂಜನೆಗಾಗಿ/ ಮೋಜಿಗಾಗಿ ಮತ್ತು ಗಲಾಟೆ – ಸಂಘರ್ಷಗಳು ಕಾರಣವಾಗಿವೆ.

**ಮಧ್ಯಪಾನದಿಂದಾಗುವ ಸಮಸ್ಯೆಗಳು**

ಮಧ್ಯಪಾನ ಮತ್ತು ಧೂಮಪಾನದಿಂದ ಹಲವಾರು ಸಮಸ್ಯೆಗಳು ಕುಟುಂಬ ಮತ್ತು ಸಮಾಜದ ಮೇಲೆ ವ್ಯತಿರಿಕ್ತ ಪರಿಣಾಮವನ್ನುಂಟು ಮಾಡುತ್ತಿದೆ. ಇದರಿಂದಾಗಿ ಮನೆಯ ಆರ್ಥಿಕ ಮಟ್ಟ ಕುಸಿದು ಬಡತನ ತಲೆದೂರುವುದರ ಜೊತೆಗೆ ಕೌಟುಂಬಿಕ ವಿಘಟನೆ, ಮಕ್ಕಳು ದಾರಿ ತಪ್ಪುವಿಕೆ, ಆರೋಗ್ಯದ ಸಮಸ್ಯೆಗಳು, ಸಾಮಾಜಿಕ ಸ್ಥಾನಮಾನ ಕುಸಿತ, ಮಾನಸಿಕ ಸೀಮಿತತೆಯನ್ನು ಕಳೆದುಕೊಳ್ಳುವನು ಮತ್ತು ಅನೈತಿಕ ಅವ್ಯವಹಾರ ಹೆಚ್ಚಾಗುತ್ತಿದೆ.

**ಸಂಶೋಧನಾ ಫಲಿತಾಂಶ ಮತ್ತು ಚರ್ಚೆಗಳು**

ಪ್ರಸ್ತುತ ಸಂಶೋಧನೆಯ ಪ್ರಕಾರ ಮಧ್ಯಪಾನ ಮಾಡುವವರ ಪ್ರಮಾಣವನ್ನು ಸಾಮಮಾಜಿಕವಾರು ನೋಡಿದಾಗ ಅತ್ಯಂತ ಹೆಚ್ಚು (ಶೇ.48%). ಪರಿಶಿಷ್ಟ ಸಮುದಾಯದ ಕೃಷಿಕರು ಮಧ್ಯಪಾನ ಮಾಡುವುದನ್ನು ಕಾಣಬಹುದಾಗಿದೆ. ಇನ್ನುಳಿದಂತೆ ಮೇಲ್ವರ್ಗದ ಹಿಂದುಳಲ್ಲಿ ಶೇ.12 ರಷ್ಟು ಹಾಗೂ ಮುಸ್ಲಿಂರಲ್ಲಿ ಶೇ 10 ರಷ್ಟು ಕೃಷಿಕರು ಮಧ್ಯವ್ಯಸನಿಗಳಾಗಿರುವುದನ್ನು ಕಾಣಬಹುದಾಗಿದೆ. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದರುವ ಪರಿಶಿಷ್ಟ ಸಮುದಾಯದವರು ಕೃಷಿ ಕೂಲಿ ಮತ್ತು ಕಷ್ಟಕರ ಕೆಲಸಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಸಮಾಜದಲ್ಲಿ ಅವಮಾನ, ಶೋಷಣೆ, ಬಡತನ ಈ ಸಮುದಾಯದಲ್ಲಿ ಹೆಚ್ಚಿದ್ದು, ಇವುಗಳಿಂದ ಮಧ್ಯಪಾನ  ಮಾಡುವವರ ಪ್ರಮಾಣ ಈ ಸಮುದಾಯದಲ್ಲಿ ಅಧಿಕವಾಗಿದೆ.

ಧರ್ಮವಾರು ಗಮನಿಸಿದಾಗ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಕೃಷಿಕರಲ್ಲಿ ಶೇ.86 ರಷ್ಟು ಕೃಷಿಕರು ಹಿಂದೂ ಧರ್ಮಿಯರಾಗಿದ್ದು, ಶೇ.14 ರಷ್ಟು ಮುಸ್ಲಿಂ ಸಮುದಾಯಕ್ಕೆ

ಸೇರಿದವರಾಗಿದ್ದಾರೆ. ಮಧ್ಯಪಾನ ಮಾಡುವವರಲ್ಲಿ ವಿವಾಹಿತರ ಪ್ರಮಾಣ ಶೇಕಡ 65 ರಷ್ಟಿದ್ದು, ಅವಿವಾಹಿತರ ಪ್ರಮಾಣ ಶೇಕಡಾ 30 ರಷ್ಟಿದೆ. ಕೌಟುಂಬಿಕ ಕಲಹಗಳು ವಿವಾಹಿತ ಕೃಷಿಕರ ಕುಟುಂಬಗಳಲ್ಲಿ ಹೆಚ್ಚಿರುವುದು ಹಾಗೂ ಜವಬ್ದಾರಿಗಳು ಹೆಚ್ಚಿರುವುದ್ದರಿಂದ ಒತ್ತಡವನ್ನು ನಿವಾರಿಸಿಕೊಳ್ಳಲು ಮಧ್ಯಪಾನದಲ್ಲಿ ತೊಡಗಿರುವುದನ್ನು ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ವೃತ್ತಿಗನುಗುಣವಾಗಿ ನೋಡುವುದಾದರೆ ಮಧ್ಯಪಾನ ಮಾಡುವ ಕೃಷಿಕರ ಮನೆಯಲ್ಲಿ ಸರ್ಕಾರಿ ನೌಕರರ ಪ್ರಮಾಣ ಶೇ. 15 ರಷ್ಟಿದ್ದು ಇತರ ವೃತ್ತಿಗಳಲ್ಲಿ ತೊಡಗಿರುವವರ ಪ್ರಮಾಣ ಶೇಕಡಾ 85 ರಷ್ಟಿದೆ. ಈ ಅಂಶವನ್ನು ಗಮನಿಸಿದಾಗ ವೃತ್ತಿ ಮತ್ತು ಮಧ್ಯಪಾನ ಚಟಕ್ಕೆ ಪರಸ್ಪರ ಸಂಬಂಧವಿರುವುದನ್ನು ಕಾಣಬಹುದಾಗಿದೆ.

ಮಧ್ಯಪಾನ ಮಾಡುವವರಲ್ಲಿ ಅವಿಭಕ್ತ ಕುಟುಂಬದವರ ಪ್ರಮಾಣ ಶೇಕಡ 80 ರಷ್ಟಿದ್ದು, ವಿಭಕ್ತ ಕುಟುಂಬದವರ ಪ್ರಮಾಣ ಶೇಕಡ 20 ರಷ್ಟಿದೆ. ಅಕ್ಷರಸ್ಥರ ಪ್ರಮಾಣ ಶೇಕಡ 60 ರಷ್ಟಿದ್ದು, ಅನಕ್ಷರಸ್ಥರ ಪ್ರಮಾಣ ಶೇ.40ರಷ್ಟಿದೆ ಅಂದರೆ ವಿದ್ಯಾವಂತ ಕೃಷಿಕರಲ್ಲಿಯೂ ಕೂಡ ಮಧ್ಯಪಾನ ವ್ಯಸನ ಹೆಚ್ಚಿರುವುದನ್ನು ಈ ಅಂಶದಿಂದ ತಿಳಿದುಕೊಳ್ಳಬಹುದಾಗಿದೆ. ಮಧ್ಯಪಾನ ಮಾಡುವವರಲ್ಲಿ ಶೇ. 90 ಕ್ಕೂ ಹೆಚ್ಚು ಕುಟುಂಬಗಳು ಬಡತನ ರೇಖೆಗಿಂತ ಕೆಳಗಿದ್ದಾರೆ.

ಅಧ್ಯಯನಕ್ಕೊಳಪಡಿಸಿರುವ ಶೇ. 100 ರಷ್ಟು ಕೃಷಿಕರಲ್ಲೂ ಕೂಡ ಒಂದಲ್ಲ ಒಂದು ಆರೋಗ್ಯ ಸಮಸ್ಯೆಯನ್ನು ಎದುರಿಸುತ್ತಿರುವುದನ್ನು ಕಾಣಬಹುದಾಗಿದೆ. ಪ್ರಸುತ ಶೇ. 60 ಕ್ಕೂ ಹೆಚ್ಚು ಮಂದಿ ಶ್ವಾಸಕೋಶ ಸಂಬಂಧಿತ ಸಮಸ್ಯೆಗಳಿಂದ ಬಳಲುತಿದ್ದರೆ, ಶೇ. 7 ರಷ್ಟು ಮಂದಿ ಹೃದಯ ಸಂಬಂಧಿತ ಸಮಸ್ಯೆಗಳಿಂದ ಬಳಲುತ್ತಿದ್ದಾರೆ.

ಇನ್ನುಳಿದಂತೆ ಶೇ.45 ರಷ್ಟು ಮಂದಿ ದೈಹಿಕ ಶ್ರಮ ಮತ್ತು ವೃತ್ತಿ ಸಮಸ್ಯೆ, ಶೇ.20 ರಷ್ಟು ಮಾನಸಿಕ ಸಮಸ್ಯೆ (ಮಾನಸಿಕ ನೆಮ್ಮದಿ ಕಾಣಲು), ಶೇ.13 ಕೌಟುಂಬಿಕ ಕಲಹಗಳು, ಶೇ.12 ರಷ್ಟು ಮನೋರಂಜನೆ/ಮೋಜಿಗಾಗಿ, ಶೇ.10 ರಷ್ಟು ಇತರ ಕಾರಣಗಳಿಂದ ಕುಡಿತದ ಚಟಕ್ಕೆ ಬಲಿಯಾಗಿರುವುದನ್ನು ಕಾಣಬಹುದಾಗಿದೆ.

**ಸಲಹೆಗಳು**

- ಸಾರ್ವಜನಿಕರಿಗೆ ಮಧ್ಯಪಾನದಿಂದಾಗುವ ದುಷ್ಪರಿಣಾಮಗಳ ಬಗ್ಗೆ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ಮೂಲಕ ಜಾಗೃತಿ ಮೂಡಿಸಬೇಕು.
- ಮಧ್ಯ ಮಾರಾಟ ಮತ್ತು ಪ್ರಚಾರದ ಜಾಹಿರಾತುಗಳನ್ನು ನಿಯಂತ್ರಿಸಬೇಕು.
- ಮಧ್ಯಪಾನ ಮತ್ತು ದೂಮಪಾನವನ್ನು ಕಡ್ಡಾಯವಾಗಿ ನಿಷೇಧಿಸಬೇಕು.

- ಹಳ್ಳಿಗಳಲ್ಲಿ ಮಧ್ಯದಂಗಡಿ ತೆರೆಯಲು ಹೊಸದಾಗಿ ಅನುಮತಿ ನೀಡಬಾರದು ಮತ್ತು ಅಕ್ರಮವಾಗಿ ಮಧ್ಯಮಾರಾಟ ಮಾಡುವ ಅಂಗಡಿಗಳನ್ನು ಮುಚ್ಚಬೇಕು.
- ಮದ್ಯಪಾನ ನಿರ್ಮೂಲನೆಗಾಗಿ ಯತ್ನಿಸುತ್ತಿರುವ ಸಂಘ ಸಂಸ್ಥೆಗಳಿಗೆ ಸರ್ಕಾರಗಳು ಹೆಚ್ಚಿನ ಪ್ರೋತ್ರಾಹ ಧನ ನೀಡಬೇಕು.
- ಎಲ್ಲಕ್ಕಿಂತ ಮುಖ್ಯವಾಗಿ ಸರ್ಕಾರ ಮಧ್ಯದಿಂದ ಬರುವ ಆದಾಯದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿಕೊಳ್ಳಬೇಕು.

**ಉಪಸಂಹಾರ**

ನಮ್ಮ ದೇಶದಲ್ಲಿ ಮಾದಕ ದ್ರವ್ಯ ಅಥವ ಮಧ್ಯಪಾನವನ್ನು ಮಾಡುವವರು ಸಂಖ್ಯೆ ಹೆಚ್ಚಾಗುತ್ತದೆ, ಮಧ್ಯ ಸೇವನೆಯು ಸಾಮಾಜಿಕ ಮತ್ತು ಆರೋಗ್ಯದ ಸಮಸ್ಯೆ ಎಂದು ಗೊತ್ತಿದ್ದರೂ ಕೂಡ ಮಧ್ಯದ ದಾಸರಾಗುತ್ತಿದ್ದಾರೆ. ಮಧ್ಯವ್ಯಸನಿಗಳ ಮನಸ್ಸನ್ನ ಪರಿರ್ವತನೆ ಮಾಡಿ ಅದರಿಂದ ಮುಕ್ತರಾಗುವಂತೆ ಮಾಡಬೇಕು. ಇಲ್ಲದಿದ್ದರೆ ಶಿಕ್ಷೆ ಅಥವಾ ದಂಡ ವಿಧಿಸುವ ಮುಖಾಂತರ ಸುಧಾರಿಸಬೇಕು. ಮಧ್ಯಪಾನ ಮಾಡುವವರ ಸಂಖ್ಯೆ ಕಡಿಮೆ ಇರುವಾಗಲೆ ಇದನ್ನು ನಿಯಂತ್ರಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದರೆ ಈ ಸಮಸ್ಯೆಯನ್ನು ಸುಧಾರಿಸಲು ಸಾಧ್ಯ.

**ಪರಾಮರ್ಶನ ಗ್ರಂಥಗಳು**


- Bennett. (1993). Boundaries between normal and pathological drinking: a cross-cultural comparison. Alcohol Health and Research World, Vol.17. No. 2, Pp.190–195
- Deben B. Singh, Kennedy Singh and Khundongbam Gyanabati Devi. (2018). Youth and Alcohol: A Case Study at Andro Village, Manipur, India. International Journal of Creative Research Thoughts (IJCRT), Vol. 6. Issue 1, Pp. 1362- 1368. Data retrieved from https://www.ijcrt.org/papers/IJCRT1803080.pdf on 1/03/2021
- Government of India. (2005). Guideline for the Implementation of the Project Awareness and Education for Prevention of Drug Abuse & Alcoholism in Manipur'. Nehru Yuva Kendra Sangathan, New Delhi.

- Jaydeep patra et.al. (2009). Deaths Associated with High-Volume Drinking of Alcohol Among Adults in Canada in 2002: A Need for Primary Care Intervention. Contemprroy Drug Problems. Vol. 36. Pp. 283–301. Data retrived from https://heinonline.org/HOL/LandingPage?handle=hein.journals/condp36&div=16&id=&page= on 1/03/2021
- Jurgen Rehm. (2011). The Risks Associated With Alcohol Use and Alcoholism. Alcohol Res Health. Vol. 34 No. 2. Pp. 135–143
- Lorand B. (1996). Social Influences: Effects of the Social Environment on the Use of Alcohol and Other Drugs'. Psycho Info, Vol. 31, No. 3, Pages 343-373
- National Institute on Alcohol Abuse and Alcoholism (NIAAA). (2010). Rethinking Drinking: Alcohol and Your Health. Pub. No. 10–3770. Rockville, MD: NIAAA
- Radhika Kapur. (2019). Problems and Challenges in Rural Areas. Data retrieved from https://www.researchgate.net/publication/332187494_Problems_and_Challenges_in_Rural_Areas on 01/03/2021